**ದಿನಾಂಕ 02.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು .**

**ಮುಖ್ಯ ವಿಚಾರಣೆಃ 2ನೇ ಎದುರುದಾರರ ಪರ ಮಾನ್ಯ ವಕೀಲರಿಂದ.**

ನನ್ನ ಮುಖ್ಯ ವಿಚಾರಣಾ ಸಾಕ್ಷ್ಯವನ್ನು ಪ್ರಮಾಣ ಪತ್ರದ ರೂಪದಲ್ಲಿ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಚಾರಗಳನ್ನು ನಾನೇ ಹೇಳಿ ಬರೆಯಿಸಿ ರುಜು ಮಾಡಿದ್ದು ಅದರಲ್ಲಿರುವ ವಿಚಾರಗಳು ಸತ್ಯವಾಗಿವೆ .

ಪರ್ಮಿಟ್ ಎಕ್ಸ್ ಟ್ರ್ಯಾಕ್ಟ್ ನ ಧೃಡಿಕೃತ ಪ್ರತಿಯನ್ನು **ನಿ.ಆರ್ 1** ಎಂದು, ಗುರುತಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರರ ಪರ ಮಾನ್ಯ ವಕೀಲರಿಂದ.**

ಆಪಾದಿತ ವಾಹನ ನಮ್ಮ ಶಾಲಾ ವಾಹನ ಎಂದರೆ ಸರಿ. ಅಪಘಾತವಾದಾಗ ವಾಹನದ ವಿಮೆ ಚಾಲ್ತಿಯಲ್ಲಿತ್ತು ಎಂದರೆ ಸರಿ. ವಿಮೆ ಪಡೆಯುವ ಸಂದರ್ಭದಲ್ಲಿ ವಾಹನ ಎಫ್.ಸಿ, ಪರ್ಮಿಟ್ ಮತ್ತು ಇತರ ಅವಶ್ಯಕ ದಾಖಲಾತಿಗಳನ್ನು ನೀಡಿರುತ್ತೇವೆ ಎಂದರೆ ಸರಿ. ಅಪಘಾತ ನಮ್ಮ ವಾಹನದ ಚಾಲಕನ ತಪ್ಪಿ ನಿಂದ ಸಂಭವಿಸಿದೆ ಎಂದು ಪೊಲೀಸರು ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ.

ನ್ಯಾಯಾಲಯದ ಪ್ರಶ್ನೆಃ ಪ್ರಸ್ತುತ ಪ್ರಕರಣದ ಸಮನ್ಸ್ ಜಾರಿಯಾಗಿತ್ತಾ?

ಉತ್ತರಃ ಹೌದು.

ನ್ಯಾಯಾಲಯದ ಪ್ರಶ್ನೆಃ ಯಾವ ಕಾರಣಕ್ಕಾಗಿ ನ್ಯಾಯಾಲಯಕ್ಕೆ ಹಾಜರಾಗಿಲ್ಲ?

ಉತ್ತರಃ ನಾವು ಬಂದಿದ್ದೆವು, ವಕೀಲರು ಇಲ್ಲದ ಕಾರಣ ಹಾಜರಾಗಲಿಲ್ಲ. ನಂತರದಲ್ಲಿ ನಾವು ಬಂದಿರುವುದಿಲ್ಲ.

ನ್ಯಾಯಾಲಯದ ಪ್ರಶ್ನೆಃ ನಂತರದಲ್ಲಿ ವಕೀಲರನ್ನು ಭೇಟಿ ಮಾಡಿ ಪ್ರಕರಣದ ಬಗ್ಗೆ ಮಾಹಿತಿ ಪಡೆದಿರುತ್ತೀರಾ?

ಉತ್ತರಃ ಇಲ್ಲ.

ನ್ಯಾಯಾಲಯದ ಪ್ರಶ್ನೆಃ ಯಾವ ಕಾರಣಕ್ಕಾಗಿ ಮಾಹಿತಿ ಪಡೆದಿಲ್ಲ?

ಉತ್ತರಃ ವಾಹನ ನಿರ್ವಹಣೆ ಮಾಡುವವರು ಅದನ್ನು ನೋಡಿಕೊಳ್ಳುವುದಾಗಿ ತಿಳಿಸಿದ ಮೇರೆಗೆ ಪಡೆದಿಲ್ಲ.

ನ್ಯಾಯಾಲಯದ ಪ್ರಶ್ನೆಃ ಪ್ರಕರಣದ ಸ್ವರೂಪದ ಬಗ್ಗೆ ಮಾಹಿತಿ ಇದೆಯಾ?

ಉತ್ತರಃ ಇಲ್ಲ. ಸಾಕ್ಷಿಯು ನಂತರದಲ್ಲಿ ಪ್ರಕರಣದ ಬಗ್ಗೆ ವಿವರಿಸಿ ಹೇಳಿದಾಗ ಪರಿಹಾರ ಕೋರಿ ಸಲ್ಲಿಸಿರುವ ಬಗ್ಗೆ ಮಾಹಿತಿ ಇರುವುದಾಗಿ ತಿಳಿಸಿರುತ್ತಾರೆ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**